# ಸ್ವಯಂ ಘೋಷಣಾ ಪತ್ರ

ಶ್ರೀ/ಶ್ರೀಮತಿ/ಕುಮಾರಿ------------------------------------------------------------------------------------------ಆದ ನಾನು ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಿಂದ 2019-20ನೇ ಸಾಲಿನಲ್ಲಿ --------------------------------------ಸಂಸ್ಥೆಗೆ ಯು.ಪಿ.ಎಸ್.ಸಿ./ಕೆ.ಎ.ಎಸ್. ಸ್ಪರ್ಧಾತ್ಮಕ ಪರೀಕ್ಷೆಯ ಪೂರ್ವಭಾವಿ ತರಬೇತಿಗಾಗಿ ಆಯ್ಕೆಯಾಗಿರುತ್ತೇನೆ. ತರಬೇತಿ ಅವಧಿಯಲ್ಲಿ ನಾನು ಉತ್ತಮ ನಡತೆಯಿಂದ ನಡೆದುಕೊಳ್ಳುತ್ತೇನೆ ಮತ್ತು ಇಲಾಖೆಯಿಂದ ನೀಡುವ ತರಬೇತಿಯ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಲು ವಿದ್ಯಾಭ್ಯಾಸದಲ್ಲಿ ನಿರತನಾಗುತ್ತೇನೆ ಎಂದು ದೃಢೀಕರಿಸುತ್ತೇನೆ. ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಿಂದ ತರಬೇತಿ ಅವಧಿಗೆ ನೀಡುವ ಮಾಸಿಕ ಶಿಷ್ಯವೇತನ ಹಾಗೂ ಪ್ರಯಾಣ ಭತ್ಯೆಯನ್ನು ಮಂಜೂರು ಮಾಡುತ್ತಿದ್ದು, ಸದರಿ ಶಿಷ್ಯ ವೇತನವನ್ನು ವಿದ್ಯನ್ಮಾನ ವರ್ಗಾವಣೆ (NEFT/RTGS) /ಕೆ-2 ಮೂಲಕ ಆಧಾರ ಲಿಂಕ್ಡ್ ಆಗಿರುವ ರಾಜ್ಯದಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವಿವಿಧ ಶಾಖೆಗಳಲ್ಲಿ ಹೊಂದಿರುವ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿದ್ದು, ನಾನು ಹೊಂದಿರುವ ಬ್ಯಾಂಕ್ ಖಾತೆಗೆ ಸಂಬಂಧಿಸಿದ ದಾಖಲೆಗಳನ್ನು ಇಲಾಖೆಗೆ ನೀಡಲು ಒಪ್ಪಿರುತ್ತೇನೆ.

ತರಬೇತಿಯ ನಂತರ ನಾನು ಯಾವುದಾದರೂ ಹುದ್ಧೆಗೆ ಆಯ್ಕೆಯಾದಲ್ಲಿ ಆ ಬಗ್ಗೆ ಮಾಹಿತಿಯನ್ನು ಇಲಾಖೆಗೆ ನೀಡಲು ಬದ್ಧನಾಗಿರುತ್ತೇನೆ. ತರಬೇತಿ ಅವಧಿಯಲ್ಲಿ ರಜೆ ತೆಗೆದುಕೊಳ್ಳಬೇಕಾದ ಸಂದರ್ಭ ಬಂದಲ್ಲಿ ಮುಂಚಿತವಾಗಿ ರಜೆ ಅರ್ಜಿ ನೀಡಿ ಒಪ್ಪಿಗೆ ಪಡೆಯುತ್ತೇನೆ. ಒಂದು ಮಾಹೆಯ ತರಬೇತಿ ಅವಧಿಯಲ್ಲಿ 3 ಅಥವಾ 3ಕ್ಕಿಂತ ಹೆಚ್ಚು ದಿನ ಗೈರು ಹಾಜರಾತಿ ಹೊಂದಿದ್ದರೆ, ದಿನವಾರು ಲೆಕ್ಕಹಾಕಿ ಗೈರು ಹಾಜರಾದ ದಿನಕ್ಕೆ ಶಿಷ್ಯ ವೇತನವನ್ನು ಕಡಿತಗೊಳಸುವ ವಿಷಯ ಹಾಗೂ 75%ಕ್ಕಿಂತ ಕಡಿಮೆ ಹಾಜರಾತಿ ಹೊಂದಿದ್ದರೆ ಶಿಷ್ಯ ವೇತನ ನೀಡುವುದಿಲ್ಲವೆಂದು ತಿಳಿದಿರುತ್ತದೆ.

ನಾನು ಮೊದಲನೇ ಬಾರಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಿಂದ ಸೌಲಭ್ಯ ಪಡೆಯುತ್ತಿದ್ದು, ಇಲಾಖೆಯಿಂದ ಈವರೆಗೆ ಯಾವುದೇ ತರಬೇತಿಯನ್ನು ಪಡೆದಿರುವುದಿಲ್ಲವೆಂದು ಪ್ರಮಾಣ ಮಾಡುತ್ತಿದ್ಧೇನೆ. ನಾನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದವನಾಗಿದ್ದು, ನನ್ನ ಕುಟುಂಬದ ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದ ರೂ.----ಲಕ್ಷ (ರೂಪಾಯಿ-------------------------------)ಮೀರಿರುವುದಿಲ್ಲ ಎಂದು ಘೋಷಿಸುತ್ತಿದ್ಧೇನೆ. ಒಂದು ವೇಳೆ ನಾನು ನೀಡಿದ ದಾಖಲೆಗಳು/ಮಾಹಿತಿಗಳು ಸುಳ್ಳೆಂದು ಕಂಡು ಬಂದಲ್ಲಿ ಇಲಾಖೆಯು ನನ್ನ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬಹುದೆಂದು ಹಾಗೂ ನಾನು ತರಬೇತಿಯನ್ನು ಮಧ್ಯದಲ್ಲಿ ಬಿಟ್ಟು ಹೋದರೆ ಇಲಾಖೆಯು ನನ್ನ ತರಬೇತಿಗಾಗಿ ವೆಚ್ಚ ಮಾಡಿರುವ ಸಂಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಹಿಂದಿರುಗಿಸಲು ಒಪ್ಪಿರುತ್ತೇನೆ ಎಂದು ಈ ಮೂಲಕ ಪ್ರಮಾಣ ಮಾಡಿ ಸಹಿ ಮಾಡಿರುತ್ತೇನೆ.

ದಿನಾಂಕ:

ಅಭ್ಯರ್ಥಿಯ ಸಹಿ, ವಿಳಾಸ ಮತ್ತು
ದೂರವಾಣಿ ಸಂಖ್ಯೆ

Scanned by CamScanner